# <u>ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಧಾರವಾಡ</u>

## <u>ವಿಶೇಷ ಎನ್.ಡಿ.ಪಿ.ಎಸ್. ಸಂಖ್ಯೆ 7/2020</u>

ಫ್ರಾಸಾ-03

ಚಾಸಾ-01

| | | |
|---|---|---|
| ಸಾಕ್ಷಿಯ ಹೆಸರು | - | ಸುಂದರೇಶ ಹೊಳೆಯಣ್ಣವರ |
| ತಂದೆ ಹೆಸರು | - | ಕಲ್ಲಪ್ಪ |
| ವಯಸ್ಸು | - | 57 ವರ್ಷ |
| ಉದ್ಯೋಗ | - | ಸಿ ಪಿ ಐ ,ತೆಕ್ಕಲಕೋಟಾ , ಜಿಃ ಬಳ್ಳಾರಿ |
| ವಾಸಸ್ಥಳ | - | ಬಳ್ಳಾರಿ |
| ಸತ್ಯ ಪ್ರತಿಜ್ಞೆ ಮೇರೆಗೆ, ದಿನಾಂಕ | - | 08-01-2024 |

**<u>ಮುಖ್ಯ ವಿಚಾರಣೆ ವಿಶೇಷ ಸರ್ಕಾರಿ ಅಭಿಯೋಜಕರಿಂದಃ</u>**

ದಿಃ 18-12-2019 ರಿಂದ ದಿಃ 3-9-2021ರ ವರೆಗೆ ಪೊಲೀಸ ಇನ್ಸಪೆಕ್ಟರ ಎಂದು ಉಪನಗರ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿಃ 2-9-2020ರಂದು ಮಧ್ಯಾಹ್ನ 3.15 ಘಂಟೆ ಸುಮಾರಿಗೆ ನಾನು ಎಸ್ ಎಚ್ ಓ ಕರ್ತವ್ಯದಲ್ಲಿದ್ದಾಗ ಯಾರೋ ಇಬ್ಬರು ವ್ಯಕ್ತಿಗಳು ಮೋಟಾರ ಸೈಕಲ ಮೇಲೆ ಗಾಂಜಾ ತೆಗೆದುಕೊಂಡು ದೇಸಾಯಿ ಸರ್ಕಲ ಕಡೆ ಬರುತ್ತಿದ್ದಾರೆಂದು ಬಾತ್ಮಿ ಬಂದ ಮೇರೆಗೆ ನಾನು ಮಾನ್ಯ ಎ ಸಿ ಪಿ ರವರಿಗೆ ಲಿಖಿತವಾಗಿ ವಿಷಯ ತಿಳಿಸಿ ಅವರಿಂದ ಅನುಮತಿ ಪಡೆದಿರುತ್ತೇನೆ. ಅನುಮತಿ ಕೋರಿ ಬರೆದ ಪತ್ರದ ನಕಲನ್ನು ನೋಡುತ್ತಿದ್ದು ಅದನ್ನು ನಿಶಾನೆ ಪಿ- 46 ಎಂದು , ಸಾಕ್ಷಿಯ ಸಹಿಯನ್ನು ನಿಶಾನೆ ಪಿ- 46 (ಎ) ಎಂದು ಹಾಗೂ ಸ್ವೀಕೃತಿಯನ್ನು ನಿಶಾನೆ ಪಿ- 46 (ಬಿ) ಎಂದು ಗುರುತಿಸಲಾಯಿತು. ಎ ಸಿ ಪಿ ರವರು ನೀಡಿದ ಅನುಮತಿ ಪತ್ರವನ್ನು ನೋಡುತ್ತಿದ್ದು ಅದನ್ನು ನಿಶಾನೆ ಪಿ-47 ಎಂದು ಗುರುತಿಸಲಾಯಿತು.

3. ಇಬ್ಬರು ಸರ್ಕಾರಿ ಪಂಚರನ್ನು ಕಳುಹಿಸುವಂತೆ ತಹಶೀಲ್ದಾರ ಹುಬ್ಬಳ್ಳಿ ರವರಿಗೆ ಲಿಖಿತವಾಗಿ ಮನವಿ ಸಲ್ಲಿಸಿದ್ದೇನೆ. ಮನವಿ ಪತ್ರದ ನಕಲನ್ನು ನಿಶಾನೆ ಪಿ- 48 ಎಂದು ಸಾಕ್ಷಿಯ ಸಹಿಯನ್ನು ನಿಶಾನೆ ಪಿ- 48 (ಎ) ಎಂದು ಗುರುತಿಸಲಾಯಿತು. ತಹಶೀಲ್ದಾರ ರವರು ನೀಡಿದ ಸ್ವೀಕೃತಿಯನ್ನು ನಿಶಾನೆ ಪಿ- 48 (ಬಿ) ಎಂದು ಗುರುತಿಸಲಾಯಿತು. ತಹಶೀಲ್ದಾರರು ಲೋಹಿತ ಮತ್ತು ಮಹೇಶ ಎನ್ನುವವರನ್ನು ಪಂಚರಾಗಿ ಕಳುಹಿಸಿರುತ್ತಾರೆ. ಸದರಿ ತಹಶೀಲ್ದಾರರು ನೀಡಿದ ಪತ್ರವನ್ನು ನಿಶಾನೆ ಪಿ-49 ಎಂದು ಗುರುತಿಸಲಾಯಿತು. ಲೋಹಿತ ಮತ್ತು ಮಹೇಶ ರವರಿಗೆ ಪಂಚನಾಮೆಗೆ ಸಹಕರಿಸುವಂತೆ ನೋಟೀಸು ನೀಡಿ ಒಪ್ಪಿಗೆ ಪಡೆದುಕೊಂಡಿದ್ದೇನೆ. ಸದರಿ ನೋಟೀಸಗಳನ್ನು ಈಗಾಗಲೇ ನಿಶಾನೆ ಪಿ-1 ಮತ್ತು 2 ಎಂದು ಗುರುತಿಸಿದೆ. ಸಾಕ್ಷಿಯ ಸಹಿಗಳನ್ನು ನಿಶಾನೆ ಪಿ-1(ಬಿ) ಮತ್ತು ನಿಶಾನೆ ಪಿ-2 (ಬಿ) ಎಂದು ಗುರುತಿಸಲಾಯಿತು. ಆರೋಪಿತರ ಅಂಗಶೋಧನೆಗಾಗಿ ಪತ್ರಾಂಕಿತ ಅಧಿಕಾರಿಯನ್ನು ಕಳುಹಿಸಿಕೊಡುವಂತೆ ಆಯುಕ್ತರು, ಹುಬ್ಬಳ್ಳಿ ಧಾರವಾಡ ಮಹಾನಗರ ಪಾಲಿಕೆಯವರಿಗೆ ಕೋರಿಕೊಂಡಿರುತ್ತೇನೆ. ಅಯುಕ್ತರಿಗೆ ಬರೆದ ಪತ್ರದ ನಕಲನ್ನು ನಿಶಾನೆ ಪಿ-50 ಎಂದು ಸಾಕ್ಷಿಯ ಸಹಿಯನ್ನು ನಿಶಾನೆ ಪಿ-50(ಎ) ಎಂದು ಹಾಗೂ ಸ್ವೀಕೃತಿಯನ್ನು ನಿಶಾನೆ ಪಿ- 50(ಬಿ) ಎಂದು ಗುರುತಿಸಲಾಯಿತು. ಚಾಸಾ-8 ರಿಯಾಜ ಅಕ್ಕದ ರವರಿಗೆ ನೋಟೀಸು ನೀಡಿ ದಾಳಿ ಸಮಯದಲ್ಲಿ ಪಂಚರಾಗಿ ಸಹಕರಿಸುವಂತೆ ನೋಟೀಸು ನೀಡಿ ಒಪ್ಪಿಗೆ ಪಡೆದಿದ್ದೇನೆ. ನೋಟೀಸನ್ನು ನಿಶಾನೆ ಪಿ- 51 ಎಂದು ಸಾಕ್ಷಿಯ ಸಹಿಯನ್ನು ನಿಶಾನೆ ಪಿ- 51 (ಎ) ಎಂದು ಹಾಗೂ ರಿಯಾಜ ರವರ ಒಪ್ಪಿಗೆ ಸಹಿಯನ್ನು ನಿಶಾನೆ ಪಿ-51 (ಬಿ) ಎಂದು ಗುರುತಿಸಲಾಯಿತು. ತೂಕ ಮಾಡುವ ವ್ಯಕ್ತಿಯನ್ನು ಕಳುಹಿಸುವಂತೆ ಸಹಾಯಕ ನಿರೀಕ್ಷಕರು ಕಾನೂನು ಮಾಪನ ಶಾಸ್ತ್ರ ಇಲಾಖೆ ಎ ಪಿ ಎಂ ಸಿ ರವರಿಗೆ ಪತ್ರ ಕಳುಹಿಸಿದ್ದೇನೆ. ಸದರಿ ಪತ್ರದ ನಕಲನ್ನು ನಿಶಾನೆ ಪಿ- 52 ಎಂದು ಸಾಕ್ಷಿಯ ಸಹಿಯನ್ನು ನಿಶಾನೆ ಪಿ- 52 (ಎ) ಎಂದು ಹಾಗೂ ಸ್ವೀಕೃತಿಯನ್ನು ನಿಶಾನೆ ಪಿ- 52 (ಬಿ) ಎಂದು ಗುರುತಿಸಲಾಯಿತು. ಅದರಂತೆ ಚಾಸಾ-9 ಸಿದ್ದಪ್ಪ ಪೂಜಾರ ರವರು ನಮ್ಮ ಠಾಣೆಗೆ ಬಂದಿರುತ್ತಾರೆ. ಸದರಿಯವರಿಗೆ ನೋಟೀಸು ನೀಡಿ ಒಪ್ಪಿಗೆ ಸಹಿ

ಪಡೆದಿರುತ್ತೇನೆ. ನೋಟೀಸನ್ನು ನಿಶಾನೆ ಪಿ– 53 ಎಂದು ಸಾಕ್ಷಿಯ ಸಹಿಯನ್ನು ನಿಶಾನೆ ಪಿ– 53 (ಎ) ಎಂದು ಗುರುತಿಸಲಾಯಿತು. ಚಾಸಾ–9 ರವರ ಒಪ್ಪಿಗೆ ಸಹಿಯನ್ನು ನಿಶಾನೆ ಪಿ– 53 (ಬಿ) ಎಂದು ಗುರುತಿಸಲಾಯಿತು.

4. ನಂತರ ಇಬ್ಬರು ಪಂಚರು, ಪತ್ರಾಕಿತ ಅಧಿಕಾರಿ , ಸಿಬ್ಬಂದಿಗಳಾದ ಎಸ್ ಎಸ್ ಪಾಂಡೆ , ಎಂ ಬಿ ಧನಗೊಂಡ , ಎಂ ವೈ ಯಕ್ಕಡಿ , ಪಿ ಎಂ ಹೆಗ್ಗೇರಿ , ಮುಲ್ಲಾ , ಅಳಗವಾಡಿ , ಕಮತರ , ಬೀರಣ್ಣ ರವರಿಗೆ ವಿಷಯ ತಿಳಿಸಿ, ನಾವೆಲ್ಲರೂ ಸೇರಿಕೊಂಡು ಸರ್ಕಾರಿ ಜೀಪ ನಂಃ ಕೆಎ–25 –ಜಿ– 409 ರಲ್ಲಿ ಮತ್ತು ಚಾಲುಕ್ತ ಜೀಪ ನಂಃ ಕೆಎ–25–ಜಿ–652 ವಾಹನಗಳಲ್ಲಿ ಸಂಜೆ 5 ಘಂಟೆಗೆ ಠಾಣೆಯಿಂದ ಹೊರಟು ಪಿಂಟೋೀ ಸರ್ಕಲಗೆ ಹೋಗಿ , ದೇಸಾಯಿ ಸರ್ಕಲಗೆ ಹೋಗಿದ್ದೇವೆ. ವಾಹನದ ಜೊತೆಯಲ್ಲಿ ಇನ್ನಿಬ್ಬರು ಸಿಬ್ಬಂದಿ ಬೈಕನಲ್ಲಿ ಬಂದಿದ್ದಾರೆ . ದೇಸಾಯಿ ಸರ್ಕಲ ಬಳಿ ವಾಹನ ನಿಲ್ಲಿಸಿ ವಾಚ್ ಮಾಡುತ್ತಿದ್ದೆವು ಮತ್ತು ಇನ್ನಿಬ್ಬರು ಸಿಬ್ಬಂದಿಗಳು ದೇಶಪಾಂಡೆ ನಗರದ ಮುಖ್ಯ ರಸ್ತೆ ಐ ಬಿ ಕ್ರಾಸ ಹತ್ತಿರ ವಾಚ್ ಮಾಡುತ್ತ ನಿಂತರು. ಸಂಜೆ 5–50 ಘಂಟೆ ಸುಮಾರಿಗೆ ಪಿಂಟೋೀ ಸರ್ಕಲ ಬಳಿ ಇಬ್ಬರು ವ್ಯಕ್ತಿಗಳು ಬೈಕನಲ್ಲಿ ಬಂದಿದ್ದು ಬೈಕ ನಡೆಸುತ್ತಿದ್ದ ವ್ಯಕ್ತಿಯ ಬೆನ್ನ ಹಿಂದೆ ಕಪ್ಪು ಬಣ್ಣದ ಬ್ಯಾಗ ಹಾಗೂ ಹಿಂದೆ ಕುಳಿತ ವ್ಯಕ್ತಿ ಹಳದಿ ಬಣ್ಣದ ಕೈ ಚೀಲ ಹಿಡಿದುಕೊಂಡು ಕುಳಿತಿದ್ದನು. ಸದರಿ ವ್ಯಕ್ತಿಗಳ ಮೇಲೆ ಸಂಶಯ ಬಂದು ಅವರನ್ನು ಬೆನ್ನತ್ತಿದೆವು. ಆಗ ಅವರು ಬೈಕನ್ನು ಜೋರಾಗಿ ನಡೆಸುತ್ತ ದೇಶಪಾಂಡೆ ಕ್ರಾಸ ಕಡೆಗೆ ಹೋದರು. ಆಗ ಅಲ್ಲಿದ್ದ ನಮ್ಮ ಸಿಬ್ಬಂದಿ ಅವರನ್ನು ಅಡ್ಡಗಟ್ಟಲು ಸದರಿಯವರು ಮರಳಿ ಅಸೆನ ಚರ್ಚನ ಪಕ್ಕದಲ್ಲಿರುವ ಒಂದು ಕಚ್ಚಾ ರಸ್ತೆಯ ಮೂಲಕ ಹೋದರು. ಆದರೆ ಅಲ್ಲಿ ಮುಂದೆ ರಸ್ತೆ ಇಲ್ಲದ ಕಾರಣ ಸದರಿ ಬೈಕ ನಿಧಾನವಾಗಿ ಚಲಿಸುತ್ತಿತ್ತು. ಆಗ ನಮ್ಮ ಸಿಬ್ಬಂದಿ ಸದರಿ ಬೈಕ ಸವಾರರನ್ನು ಹಿಡಿದುಕೊಂಡರು. ಧನಗೊಂಡ ಮತ್ತು ಪಾಂಡೆ ಎನ್ನುವ ಸಿಬ್ಬಂದಿಗಳು ಬೈಕ ಸವಾರನನ್ನು ಹಿಡಿದುಕೊಂಡರು ಹಾಗೂ ಹಿಂದೆ ಕುಳಿತ ವ್ಯಕ್ತಿಯನ್ನು ಯಕ್ಕಡಿ ಮತ್ತು ಚಿಕ್ಕಲಗಾರ , ಹೊಸಮನಿ ಎಂಬ ಸಿಬ್ಬಂದಿಗಳು ಹಿಡಿದರು. ಆಗ ನಾವು , ಪಂಚರು , ಪತ್ರಾಂಕಿತ ಅಧಿಕಾರಿ

ಮತ್ತು ತೂಕ ಮಾಡುವ ವ್ಯಕ್ತಿ ಎಲ್ಲರೂ ಸೇರಿ ಹೋಗಿ ಅವರನ್ನು ವಿಚಾರಿಸಲಾಗಿ ಬೈಕ ಸವಾರ ತನ್ನ ಹೆಸರು ಮಾರುತಿ ಕಲ್ಲಪ್ಪ ಹರಣಶಿಕಾರಿ ಎಂದು ತಿಳಿಸಿದ್ದು ಹಾಗೂ ಇನ್ನೊಬ್ಬ ವ್ಯಕ್ತಿ ಚಂದಪ್ಪ ಸಿದ್ದಪ್ಪ ಹರಿಣಶಿಕಾರಿ ಎಂದು ತಿಳಿಸಿದನು. ಅವರ ಕೈಯಲ್ಲಿ ಗಾಂಜಾ ಇದೆ ಎಂದು ಖಾತ್ರಿಯಾದ ನಂತರ ಇದನ್ನು ಎಲ್ಲಿಂದ ತಂದಿದ್ದೀರಿ ನಿಮಗೆ ಪರ್ಮಿಟ ಇದೆಯಾ ಎಂದು ಕೇಳಿದೆವು. ಅಂಗ ಜಪ್ತಿ ಮಾಡಲು ಪತ್ರಾಂಕಿತ ಅಧಿಕಾರಿಯ ಸಮಕ್ಷಮ ಮಾಡಬೇಕೋ ಅಥವಾ ನ್ಯಾಯಾಧೀಶರ ಸಮಕ್ಷಮ ಮಾಡಬೇಕೋ ಎಂದು ಕೇಳಿ ನೋಟೀಸು ನೀಡಿದೆವು. ಮಾರುತಿ ಹರಿಣಶಿಕಾರಿ ರವರಿಗೆ ನೀಡಿದ ನೋಟಿಸನ್ನು ನೋಡುತ್ತಿದ್ದು ಅದನ್ನು ನಿಶಾನೆ ಪಿ-54 ಎಂದು ಸಾಕ್ಷಿಯ ಸಹಿಯನ್ನು ನಿಶಾನೆ ಪಿ-54 (ಎ) ಎಂದು ಗುರುತಿಸಲಾಯಿತು. ಆರೋಪಿ ಮಾರುತಿಯು ಪತ್ರಾಂಕಿತ ಅಧಿಕಾರಿಯ ಮುಂದೆ ಅಂಗಶೋಧನೆ ಮಾಡಬೇಕೆಂದು ಒಪ್ಪಿಗೆ ನೀಡಿ ಸಹಿ ಮಾಡಿದ್ದಾನೆ. ಆರೋಪಿತನ ಸಹಿಯನ್ನು ನಿಶಾನೆ ಪಿ-54 (ಬಿ) ಎಂದು ಗುರುತಿಸಲಾಯಿತು.

5. ಪತ್ರಾಂಕಿತ ಅಧಿಕಾರಿಯ ಸಮಕ್ಷಮ 1 ನೇ ಆರೋಪಿಯ ಬ್ಯಾಗನ್ನು ಪರಿಶೀಲಿಸಲಾಗಿ ಅದರಲ್ಲಿ ಎರಡು ಗಾಂಜಾ ತುಂಬಿದ ಪಾಕೇಟಗಳು ಇದ್ದವು. ಅದರಲ್ಲಿ ಒಂದು ಬ್ಯಾಗನಲ್ಲಿದ್ದ ಗಾಂಜಾವನ್ನು ತೆಗೆದು ತೂಕ ಮಾಡಲಾಗಿ ಅದು 2 ಕೆ ಜಿ 31 ಗ್ರಾಂ ತೂಕ ಇತ್ತು. ಇನ್ನೊಂದು ಬ್ಯಾಗನಲ್ಲಿದ್ದ ಗಾಂಜಾವನ್ನು ತೂಕ ಮಾಡಲಾಗಿ ಅದು 2 ಕೆ ಜಿ 20 ಗ್ರಾಂ ತೂಕ ಇತ್ತು. ಆತನ ಸ್ವಾಧೀನದಲ್ಲಿ ರೂ. 1000/- ಇತ್ತು. ಒಂದು ಕರಿ ಬ್ಯಾಗ ಮತ್ತು ಒಂದು ಮೋಟಾರ ಸೈಕಲ ಕೆಎ-26-ಇಡಿ-2911 ನ್ನು ಅಮಾನತುಪಡಿಸಿಕೊಂಡಿರುತ್ತೇವೆ. 2 ನೇ ಆರೋಪಿಯ ಬಳಿ ಇದ್ದ ಹಳದಿ ಬ್ಯಾಗನ್ನು ಪರಿಶೀಲಿಸಲಾಗಿ ಅದರಲ್ಲಿ ಗಾಂಜಾ ತುಂಬಿದ ಬಂಡಲ ಇದ್ದು ಅದನ್ನು ತೂಕ ಮಾಡಲಾಗಿ ಅದರಲ್ಲಿ ಒಂದು ಕೆ ಜಿ 49 ಗ್ರಾಂ ತೂಕದ ಗಾಂಜಾ ಇತ್ತು.

6. 1 ನೇ ಆರೋಪಿಯ ಸ್ವಾಧೀನದಿಂದ ವಶಪಡಿಸಿಕೊಂಡ 2 ಬಂಡಲ ಗಾಂಜಾದಿಂದ ತಲಾ 100 ಗ್ರಾಂ ಗಾಂಜಾವನ್ನು ಮಾದರಿಗಾಗಿ ಪಡೆಯಲಾಯಿತು. 2 ನೇ ಆರೋಪಿಯ ಸ್ವಾಧೀನದಿಂದ ವಶಪಡಿಸಿಕೊಂಡ ಗಾಂಜಾದಿಂದ ತಲಾ 50 ಗ್ರಾಂ ಗಾಂಜಾವನ್ನು ಮಾದರಿಗಾಗಿ ಪಡೆಯಲಾಯಿತು, ಮಾದರಿಗಾಗಿ ತೆಗೆದ ಗಾಂಜಾವನ್ನು ಬಿಳಿ ಬಟ್ಟೆಯಲ್ಲಿ ಸುತ್ತಿ ಪ್ಯಾಕ ಮಾಡಿ ಪಂಚರ ಮತ್ತು ಪತ್ರಾಂಕಿತ ಅಧಿಕಾರಿಗಳ ಸಹಿ ಇರುವ ಚೀಟಿ ಅಂಟಿಸಲಾಯಿತು. ಸ್ಯಾಂಪಲ ಪ್ಯಾಕಗಳಿಗೆ ಎಸ್ –1 ಎಸ್ –2 ಎಸ್ –3 ಎಂದು ಗುರುತಿಸಲಾಯಿತು. ಸ್ಯಾಂಪಲ ತೆಗೆದು ಉಳಿದ ಗಾಂಜಾಗಳನ್ನು ಆರ್ –1 , ಆರ್– 2 ಮತ್ತು ಆರ್–3 ಎಂದು ಗುರುತಿಸಲಾಯಿತು. ಸದರಿ ಪಾಕೇಟಗಳ ಮೇಲೆ ಪಂಚರ ಮತ್ತು ಪತ್ರಾಂಕಿತ ಅಧಿಕಾರಿಗಳ ಸಹಿ ಇರುವ ಚೀಟಿ ಅಂಟಿಸಲಾಯಿತು. ಸ್ಯಾಂಪಲ ಗಾಂಜಾ ಪಾಕೇಟ ಮತ್ತು ಉಳಿದ ಗಾಂಜಾ ಪಾಕೇಟ ಮೇಲೆ ಜಿ ಎಂ ಎಫ್ ಎ –2 ಬೋಲ್ಟ ಸೀಲು ಹಾಕಲಾಯಿತು. ಬೋಲ್ಟನ್ನು ಪಂಚನಾದ ಇಬ್ರಾಹಿಂಪೂರ ರವರಿಗೆ ನೀಡಿ ನ್ಯಾಯಾಲಯದ ಮುಂದೆ ಹಾಜರುಪಡಿಸುವಂತೆ ಹೇಳಿ ಅವರ ಸಹಿ ಪಡೆದಿದ್ದೇನೆ. ನಂತರ ಆರೋಪಿತರಿಗೆ ದಸ್ತಗಿರಿ ಮಾಡಿರುತ್ತೇನೆ. ಎಲ್ಲ ನಡುವಳಿಕೆಯ ಬಗ್ಗೆ ಪಿಸಿ ಮುಲ್ಲಾ ರವರ ಮುಖಾಂತರ ಫೋಟೊಗಳನ್ನು ತೆಗೆಸಿರುತ್ತೇನೆ. ಸ್ಥಳದಲ್ಲಿ ಕಚ್ಚಾ ನಕ್ಷೆ ತೆಗೆಸಿರುತ್ತೇನೆ. ಸ್ಥಳದಲ್ಲಿ ಪಂಚನಾಮೆಯನ್ನು ಸಂಜೆ 6.15 ರಿಂದ 8.15 ರ ವರೆಗೆ ಬರೆದಿದ್ದೇನೆ. ಆ ದಿನ ಬರೆದ ಪಂಚನಾಮೆಯನ್ನು ನೋಡಿದರೆ ಗುರುತಿಸುತ್ತೇನೆ. ಪಂಚನಾಮೆಯಲ್ಲಿ ಆರೋಪಿಯ ಸಹಿಯನ್ನು ಪಡೆದಿದ್ದೇನೆ. ಪಂಚನಾಮೆಯನ್ನು ಈಗಾಗಲೇ ನಿಶಾನೆ ಪಿ–3 ಎಂದು ಗುರುತಿಸಿದ್ದು , ಸಾಕ್ಷಿಯ ಸಹಿಯನ್ನು ನಿಶಾನೆ ಪಿ– 3 (ಕೆ) ಎಂದು ಗುರುತಿಸಲಾಯಿತು. ಆರೋಪಿತರ ಸಹಿಗಳನ್ನು ಗುರುತಿಸುತ್ತೇನೆ. ಆರೋಪಿ ಮಾರುತಿಯ ಸಹಿಯನ್ನು ನಿಶಾನೆ ಪಿ–3 ( ಎಲ್ ) ಎಂದು ಆರೋಪಿ ಚಂದಪ್ಪನ ಸಹಿಯನ್ನು ನಿಶಾನೆ ಪಿ– 3 (ಎಂ) ಎಂದು ಗುರುತಿಸಲಾಯಿತು. ಪಂಚರ ಸಹಿಯನ್ನು ಗುರುತಿಸುತ್ತೇನೆ. ಪಂಚರ ಸಹಿಯನ್ನು ನಿಶಾನೆ ಪಿ–3 (ಜೆ ) ಎಂದು ಗುರುತಿಸಲಾಗಿದೆ. ಆರೋಪಿತನ ಸ್ವಾದೀನದಿಂದ

ಅಮಾನತುಪಡಿಸಿದ ಮೋಟಾರ ಸೈಕಲನ್ನು ಗುರುತಿಸುತ್ತೇನೆ. ಮೋಟಾರ ಸೈಕಲನ ಫೋಟೊಗಳನ್ನು ಸಾಕ್ಷಿ ಗುರುತಿಸಿದ್ದು ಅವುಗಳನ್ನು ನಿಶಾನೆ ಪಿ–38 ರಿಂದ 40 ಎಂದು ಗುರುತಿಸಲಾಗಿದೆ. ಆರೋಪಿತರಿಂದ ಪಡೆದುಕೊಂಡು ಸ್ಯಾಂಪಲ ಗಾಂಜಾವನ್ನು ನೋಡಿದರೆ ಗುರುತಿಸುತ್ತೇನೆ. ಅವುಗಳನ್ನು ಈಗಾಗಲೇ ಮುಮಾ–1 ರಿಂದ 3 ಎಂದು ಗುರುತಿಸಲಾಗಿದೆ. 1 ನೇ ಆರೋಪಿಗೆ ಸೇರಿದ ಕಪ್ಪು ಬ್ಯಾಗ ಮತ್ತು 2 ನೇ ಆರೋಪಿಗೆ ಸೇರಿದ ಹಳದಿ ಬ್ಯಾಗನ್ನು ಗುರುತಿಸುತ್ತೇನೆ. ಅವುಗಳನ್ನು ಈಗಾಗಲೇ ಮುಮಾ–4 ಮತ್ತು 5 ಎಂದು ಗುರುತಿಸಲಾಗಿದೆ. 1 ನೇ ಆರೋಪಿತನ ಸ್ವಾದೀನದಿಂದ ಅಮಾನತುಪಡಿಸಿಕೊಂಡ ರೂ.1000 ನ್ನು ಮುಮಾ–6 ಎಂದು ಗುರುತಿಸಲಾಗಿದೆ. ಮಹೇಶ ಇಬ್ರಾಹಿಂಪೂರ ರವರಿಗೆ ಸೀಲ ಬೊಲ್ಟ ಕೊಟ್ಟು ಅವರಿಂದ ಸ್ವೀಕೃತಿ ಪತ್ರ ಪಡೆದುಕೊಂಡಿದ್ದು ಸದರಿ ಸ್ವೀಕೃತಿ ಪತ್ರವನ್ನು ನಿಶಾನೆ ಪಿ–55 ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿಶಾನೆ ಪಿ–55 (ಎ) ಎಂದು ಗುರುತಿಸಲಾಯಿತು.

7. ಆರೋಪಿಗಳನ್ನು ದಸ್ತಗಿರಿ ಮಾಡಿ ಪಂಚನಾಮೆ ಮಾಡಿದ ನಂತರ, ಆರೋಪಿಗಳು, ಪಂಚನಾಮೆ ಮತ್ತು ಮುದ್ದೆಮಾಲುಗಳ ಸಮೇತ ಠಾಣೆಗೆ ವಾಪಸಾಗಿ ಸರ್ಕಾರದ ಪರವಾಗಿ ಲಿಖಿತ ಪಿರ್ಯಾದು ಸಲ್ಲಿಸಿದ್ದೇನೆ. ಸದರಿ ಪಿರ್ಯಾದನ್ನು ನೋಡುತ್ತಿದ್ದು ಅದನ್ನು ನಿಶಾನೆ ಪಿ–56 ಎಂದು ಸಾಕ್ಷಿಯ ಸಹಿಯನ್ನು ನಿಶಾನೆ ಪಿ–56 (ಎ) ಎಂದು ಗುರುತಿಸಲಾಯಿತು. ಪಿರ್ಯಾದು ನೀಡಿದ ನಂತರ ವಿಶೇಷ ವರದಿಯನ್ನು ತಯಾರಿಸಿ ಮೇಲಾಧಿಕಾರಿಗೆ ಸಲ್ಲಿಸಿದ್ದೇನೆ. ವಿಶೇಷ ವರದಿಯ ಪ್ರತಿಯನ್ನು ನಿಶಾನೆ ಪಿ–57 ಎಂದು ಗುರುತಿಸಲಾಯಿತು.

8. ಆ ದಿನ ದಸ್ತಗಿರಿ ಮಾಡಿದ ಮಾರುತಿ ಮತ್ತು ಚಂದಪ್ಪ ಎನ್ನುವ ಆರೋಪಿಗಳನ್ನು ಗುರುತಿಸುತ್ತೇನೆ. ಸಾಕ್ಷಿ ನ್ಯಾಯಾಲಯದ ಮುಂದಿರುವ 1 ಮತ್ತು 2 ನೇ ಆರೋಪಿತರನ್ನು ಗುರುತಿಸಿದ್ದಾರೆ.

**ಪಾಟೀಸವಾಲು 1 ಮತ್ತು 2 ನೇ ಆರೋಪಿಗಳ ಪರವಾಗಿ ಶ್ರೀ. ಟಿ ಆರ್ ಪಿ ವಕೀಲರಿಂದಃ**

ಆರೋಪಿತರ ಪರ ವಕೀಲ ಶ್ರೀ ಟಿ ಆರ್ ಪಾಟೀಲ ರವರ ಕೋರಿಕೆಯ ಮೇರೆಗೆ ಪಾಟಿ ಸವಾಲನ್ನು ಮಧ್ಯಾಹ್ನ 3 ಘಂಟೆಗೆ ಮುಂದೂಡಲಾಯಿತು.

(ಈ ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಉಕ್ತ ಹೇಳಿಕೆಯ ಮೇರೆಗೆ ಗಣಕೀಕೃತ ಮಾಡಿಸಲಾಯಿತು).

ಓ. ಹೇ. ಕೇ. ಸರಿ ಇದೆ.

**(ಶ್ರೀಮತಿ ಕೆ.ಜಿ. ಶಾಂತಿ)**
ಪ್ರಧಾನ ಜಿಲ್ಲಾ, ಸತ್ರ ಹಾಗೂ ವಿಶೇಷ
ನ್ಯಾಯಾಧೀಶರು, ಧಾರವಾಡ.

**ಸಾಕ್ಷಿಯನ್ನು ಮಧ್ಯಾಹ್ನ 3 ಘಂಟೆ ಗೆ ಪುನಃ ಕರೆಸಲಾಯಿತು.**

**ಪಾಟೀಸವಾಲು 1 ಮತ್ತು 2 ನೇ ಆರೋಪಿಗಳ ಪರವಾಗಿ ಶ್ರೀ. ಟಿ ಆರ್ ಪಿ ವಕೀಲರಿಂದಃ**

9. ದಿಃ 2-9-2020 ರಂದು ಮಧ್ಯಾಹ್ನ 3.15 ಘಂಟೆಯಲ್ಲಿ ನನಗೆ ಬಾತ್ಮಿ ಬಂದಿದೆ. ಮಧ್ಯಾಹ್ನ 3.20 ಘಂಟೆಗೆ ನನ್ನ ಮೇಲಾಧಿಕಾರಿಗಳಿಗೆ ಅನುಮತಿ ಕೋರಿ ಪತ್ರ ಬರೆದಿದ್ದೇನೆ. 3.25 ಘಂಟೆಗೆ ನನಗೆ ಅನುಮತಿ ಸಿಕ್ಕಿದೆ. ನನ್ನ ಕೋರಿಕೆ ಪತ್ರವನ್ನು ಪಡೆದುಕೊಂಡ ಬಗ್ಗೆ ಸಮಯ ನಮೂದಿಸಿದೆಯೇ ಎಂದು ದಾಖಲೆ ನೋಡಿ ಹೇಳಬೇಕು. ಸಾಕ್ಷಿ ಸದರಿ ದಾಖಲೆಯನ್ನು ನೋಡಿ ಸಮಯ ನಮೂದಿಸಿಲ್ಲ ಎಂದು ಹೇಳುತ್ತಾರೆ. ನಿಶಾನೆ ಪಿ-46 ಆಧಾರದ ಮೇಲೆ ನಾನು 3.20 ಕ್ಕೆ ಅನುಮತಿ ಕೇಳಿದ್ದೇನೆ ಎಂದು ಹೇಳುತ್ತಿದ್ದೇನೆ. ನಾನು ಎಷ್ಟು ಹೊತ್ತಿಗೆ ಅನುಮತಿ ಕೋರಿ ಪತ್ರ ಬರೆದಿದ್ದೇನೆ ಎಂದು ನಿಶಾನೆ ಪಿ- 46 ದಾಖಲೆಯಲ್ಲಿ ನಮೂದು ಇಲ್ಲ. ಅನುಮತಿ ಆದೇಶ ನನಗೆ ಸಿಕ್ಕಿದ ಕಾರಣ ನಾನು 3.25 ಘಂಟೆಗೆ

ಅನುಮತಿ ನೀಡಿದ್ದಾರೆ ಎಂದು ಹೇಳುತ್ತಿದ್ದೇನೆ. ಅನುಮತಿ ಪತ್ರದಲ್ಲಿ ಸಮಯವನ್ನು ನಮೂದಿಸಿಲ್ಲ. ನಿಶಾನೆ ಪಿ-46 ಮತ್ತು 47 ದಾಳಿಗೆ ಮೊದಲು ನಾನು ಪಡೆದುಕೊಂಡ ದಾಖಲೆಗಳಲ್ಲ ಅಂದರೆ ಸರಿಯಲ್ಲ.

10. ಸಂಜೆ 5.15 ಘಂಟೆಗೆ ನಾವು ಠಾಣೆಯನ್ನು ಬಿಟ್ಟಿದ್ದೇವೆ. 3.15 ರಿಂದ ಸಂಜೆ 5.15 ಘಂಟೆ ವರೆಗೆ ನಾವು ಠಾಣೆಯಲ್ಲೇ ಇದ್ದೆವು. 3.15 ರಿಂದ ಸಂಜೆ 5.15 ರ ಸಮಯದಲ್ಲಿ ಎಫ್.ಐ.ಆರ್ ದಾಖಲೆ ಮಾಡಲು ತೊಂದರೆ ಇತ್ತು. ಸಾಕ್ಷಿ ಸ್ವತಃ ನುಡಿಯುತ್ತಾರೆ ಪಂಚರನ್ನು, ಪತ್ರಾಂಕಿತ ಅಧಿಕಾರಿಯನ್ನು ಕರೆಸುವ ಪ್ರಕ್ರೀಯೆಯಲ್ಲಿ ನಿರತರಾಗಿದ್ದೆವು. ಅಪರಾಧ ನಡೆದ ಬಗ್ಗೆ ಖಚಿತಪಡಿಸಿಕೊಳ್ಳಬೇಕಾದ ಕಾರಣ ಎಫ್.ಐ.ಆರ್ ನ್ನು ನೊಂದಣಿ ಮಾಡಿಕೊಂಡಿಲ್ಲ. ಬಾತ್ಮಿ ಬಂದ ವಿಷಯವನ್ನು ಎಫ್.ಐ.ಆರ್ ನಲ್ಲಿ ನಮೂದು ಮಾಡಿಲ್ಲ ಅಂದರೆ ಸರಿಯಲ್ಲ. ಪಿರ್ಯಾದು ನೀಡಲು ಏಕೆ ವಿಳಂಬವಾಯಿತು ಎಂದು ಎಫ್.ಐ.ಆರ್ ನಲ್ಲಿ ನಮೂದು ಮಾಡಿಲ್ಲ ಎಂಬ ಪ್ರಶ್ನೆಗೆ ಸಾಕ್ಷಿ ವಿಳಂಬವಾಗಿಲ್ಲ ಎಂದು ನುಡಿಯುತ್ತಾರೆ. ನಾನು 9.40 ಘಂಟೆಗೆ ಪಿರ್ಯಾದು ಕೊಟ್ಟಿದ್ದೇನೆ. 3.15 ರಿಂದ 9.40 ಘಂಟೆ ವರೆಗೆ ಯಾವುದೇ ವಿಳಂಬವಾಗಿಲ್ಲ.

11. ದಿಃ 2-9-2020 ರಂದು ಚಾಸಾ-11 ಎಸ್ ಎಸ್ ಪಾಂಡೆ ರವರ ಮೂಲಕ ನಾನೇ ಪತ್ರ ಕಳುಹಿಸಿದ್ದೇನೆ. ದಿಃ 2-9-2020 ರಂದು ನಾನು ಎಸ್ ಎಸ್ ಪಾಂಡೆ ರವರಿಗೆ ಪತ್ರಾಂಕಿತ ಅಧಿಕಾರಿಯನ್ನು ಕರೆದುಕೊಂಡು ಬರಲು ಪತ್ರ ಮುಖೇನ ತಿಳಿಸಿಲ್ಲ. ಅದೇರೀತಿ ಆರೋಪಣಾ ಪಟ್ಟಿಯಲ್ಲಿ ಸಾಕ್ಷಿಯಾಗಿ ಹೆಸರಿಸಿದ ಚಾಸಾ-14 ರವರ ಹೆಸರು ಬಿ ಎಂ ಹೆದ್ದೇರಿ ಇದ್ದು , ದಿಃ 2-9-2020 ರಂದು ಪತ್ರಾಂಕಿತ ಅಧಿಕಾರಿಯನ್ನು ಹಾಜರುಪಡಿಸಲು ನೀಡಿದ ನೋಟೀಸನಲ್ಲಿ ಹೆಸರಿಸಿರುವ ಹೆಸರು ಶ್ರೀ ಉಮೇಶ ಹೆದ್ದೇರಿ ಇರುತ್ತದೆ. ಉಮೇಶ ಹೆದ್ದೇರಿ ಎನ್ನುವವರು ನಮ್ಮ ಠಾಣೆಯಲ್ಲಿ ಕೆಲಸ ಮಾಡುತ್ತಾರೆ. ಬಿ ಎಂ ಹೆದ್ದೇರಿ ರವರ ಬಗ್ಗೆ ನನಗೆ ಗೊತ್ತಿಲ್ಲ. ಉಮೇಶ ಹೆದ್ದೇರಿ ರವರ ಮುಖಾಂತರ ನನ್ನ ಸಹಿ ಇರುವ

ಪತ್ರವನ್ನು ಕಳುಹಿಸಿಕೊಟ್ಟಿದ್ದೇನೆ. ದಿಃ 2-9-2020 ರಂದು ಎಸ್ ಎಸ್ ಪಾಂಡೆ ರವರಿಗೆ ನಾನು ನೋಟೀಸ ಕೊಟ್ಟಿಲ್ಲ. ನಿಶಾನೆ ಪಿ-57 ರಲ್ಲಿ ಯಾರ ಸಹಿಯೂ ಕಂಡುಬರುವುದಿಲ್ಲ ಎಂಬ ಪ್ರಶ್ನೆಗೆ ಸಾಕ್ಷಿ ಇ-ಮೇಲ್ ಮುಖಾಂತರ ಕಳುಹಿಸಿದ್ದೇನೆ ಎಂದು ನುಡಿಯುತ್ತಾರೆ.

12. ದಾಳಿಗೆ ಹೋಗುವ ಮೊದಲೂ ಎಫ್.ಐ.ಆರ್ ದಾಖಲು ಮಾಡಿಕೊಂಡು ಎಫ್.ಐ.ಆರ್ ನ್ನು ನ್ಯಾಯಾಲಯಕ್ಕೆ ಕಳುಹಿಸಿ ನಂತರ ದಾಳಿಗೆ ಹೋಗಬೇಕು ಎಂದು ನಿಯಮ ಇದೆ ಅಂದರೆ ಸರಿಯಲ್ಲ. ದಾಳಿಗೆ ಹೋಗುವ ಮೊದಲು ಸ್ಟೇಶನ ಹೌಸ್ ಡೈರಿಯಲ್ಲಿ ನಮೂದು ಮಾಡಬೇಕು ಅಂದರೆ ಸರಿ. ನಿಶಾನೆ ಪಿ-1 ರಲ್ಲಿ ಫ್ರಾಸಾ-1 ರವರು ಎಷ್ಟು ಸಮಯಕ್ಕೆ ನೋಟೀಸ ಪಡೆದುಕೊಂಡಿದ್ದಾರೆ ಎಂದು ನಮೂದು ಇಲ್ಲ. ಅದೇರೀತಿ ಚಾಸಾ-3 ರವರಿಗೆ ನೀಡಿದ ನಿಶಾನೆ ಪಿ- 2 ನೋಟಿಸನಲ್ಲಿ ಸಹ ಸಮಯ ನಮೂದಿಸಿಲ್ಲ. ಪಂಚನಾಮೆಯಲ್ಲಿ ಎಲ್ಲ ಪುಟಗಳಿಗೆ ಪಂಚರ ಸಹಿ ಪಡೆದಿಲ್ಲ. ನಿಶಾನೆ ಪಿ-3 ಕ್ಕೆ ನಾನು ಎಲ್ಲ ಪುಟಗಳಿಗೆ ಸಹಿ ಮಾಡಿಲ್ಲ . ಸಾಕ್ಷಿ ಸ್ವತಃ ನುಡಿಯುತ್ತಾರೆ ಪ್ರತಿ ಹಾಳೆಗೆ ಸಹಿ ಮಾಡಿದ್ದೇನೆ. ಪಂಚನಾಮೆಗೆ ಚಾಸಾ-18 ಪಿಸಿ 2564 ಮತ್ತು ಚಾಸಾ-19 ಪಿಸಿ 19 ಪಿಸಿ 1661 ರವರ ಸಹಿ ಪಡೆದಿಲ್ಲ ಅಂದರೆ ಸರಿ.

13. ನಿಶಾನೆ ಪಿ-48 ರಲ್ಲಿ ನೋಟೀಸು ಮುಟ್ಟಿದ್ದ ಬಗ್ಗೆ ಸಮಯ ನಮೂದಿಸಿಲ್ಲ ಅಂದರೆ ಸರಿ. ನಿಶಾನೆ ಪಿ-48 ರಲ್ಲಿ 15 ಘಂಟೆ ಎಂದು ನಮೂದು ಇದೆ. ನಿಶಾನೆ ಪಿ-50 ರಲ್ಲಿ ಸಮಯ 15 ಘಂಟೆ ಎಂದು ನಮೂದಿಸಿದೆ. ನಿಶಾನೆ ಪಿ-50 ನ್ನು ಸ್ವೀಕರಿಸಿದ ಸಮಯ ನಮೂದಿಸಿಲ್ಲ ಅಂದರೆ ಸರಿ. ನಾನು ಯಾವುದೇ ದಾಖಲೆಯಲ್ಲಿ ಸಮಯವನ್ನು ನಮೂದಿಸಿಲ್ಲ. ಸಾಕ್ಷಿ ಪುನಃ ನುಡಿಯುತ್ತಾರೆ ಪತ್ರಗಳನ್ನು ಪಡೆದುಕೊಂಡ ಸಮಯವನ್ನು ನಮೂದಿಸಿಲ್ಲ. ನಾನು ಕಳುಹಿಸಿದ ಪತ್ರಗಳಿಗಾಗಲೀ ಅಥವಾ

ಪಡೆದುಕೊಂಡ ಪತ್ರಗಳಲ್ಲಾಗಲಿ ಸಮಯ ನಮೂದಿಸಿಲ್ಲ. ನಮ್ಮ ಠಾಣೆಯಿಂದ ಕಳುಹಿಸಿದ ಪತ್ರಗಳಿಗೆ ಔಟವರ್ಡ ನಂಬರ ಹಾಕಿಲ್ಲ ಅಂದರೆ ಸರಿ. ಎಲ್ಲ ದಾಖಲೆಗಳನ್ನು ಕುಳಿತು ಸೃಷ್ಟಿಸಿದ್ದೇವೆ ಅಂದರೆ ಸರಿಯಲ್ಲ.

14. ಮುಮಾ-1 ಮತ್ತು 2 ರ ಮೇಲೆ ಅಂಟಿಸಿದ ಚೀಟಿಯ ಮೇಲೆ ಪತ್ರಾಂಕಿತ ಅಧಿಕಾರಿಯ ಸಹಿ ಇಲ್ಲ ಅಂದರೆ ಸರಿಯಲ್ಲ. ಮುಮಾ-1 ಮತ್ತು 2 ರ ಮೇಲೆ ಅಂಟಿಸಿದ ಚೀಟಿಯ ಮೇಲೆ ಆರೋಪಿಗಳ ಸಹಿ ಇಲ್ಲ ಅಂದರೆ ಸರಿಯಲ್ಲ. ನಿಶಾನೆ ಪಿ-54 ರ ದಾಖಲೆಯ ಮೇಲೆ ಒಬ್ಬ ಆರೋಪಿತನ ಸಹಿ ಮಾತ್ರ ಪಡೆದಿದ್ದೇನೆ. ಆರೋಪಿ ಮಾರುತಿ ಹರಿಣಶಿಕಾರಿ ರರ ಅಂಗ ಜಪ್ತಿ ಮಾಡಬೇಕಾಗಿದ್ದರಿಂದ ಆತನಿಗೆ ನೋಟೀಸು ಕೊಟ್ಟಿದ್ದೇನೆ. ಇನ್ನೊಬ್ಬ ಆರೋಪಿಯ ಅಂಗ ಜಪ್ತಿ ಮಾಡಿಲ್ಲ. 2 ನೇ ಆರೋಪಿಗೆ ನೋಟೀಸು ಕೊಟ್ಟಿಲ್ಲ.

15. ನಾವು ಠಾಣೆಯಿಂದ ಹೊರಡುವ ಸಮಯದಲ್ಲಿ ನಮ್ಮ ಜೀಪನಲ್ಲಿ ಎನೇನು ವಸ್ತುಗಳು ಇವೆ ಎಂದು ಪ್ರತ್ಯೇಕ ಪಂಚನಾಮೆ ಮಾಡಿಲ್ಲ. ನಮ್ಮ ಗಾಡಿಯಲ್ಲಿ ಯಾವುದೇ ಗಾಂಜಾ ಇಲ್ಲ ಮತ್ತು ಯಾವುದೇ ಪದಾರ್ಥಗಳು ಇಲ್ಲ ಎಂದು ನಿಶಾನೆ ಪಿ-3 ಪಂಚನಾಮೆಯಲ್ಲಿ ಬರೆದಿಲ್ಲ. ನಾವು ಸ್ವಯಂ ಅಂಗ ಜಪ್ತಿ ಮಾಡಿಕೊಂಡ ಬಗ್ಗೆ ಪಂಚನಾಮೆಯಲ್ಲಿ ಹೇಳಿಲ್ಲ. ದಿಃ 2-9-2020 ರಂದು ಪಂಚನಾಮೆ ಕಾಲಕ್ಕೆ 3 ಸ್ಯಾಂಪಲಗಳನ್ನು ತೆಗೆದುಕೊಂಡಿದ್ದೇವೆ.

16. ನಾವು ಅಮಾನತುಪಡಿಸಿಕೊಂಡ ಗಾಂಜಾದಲ್ಲಿ ಒಣಗಿದ ಎಲೆಗಳು ಮತ್ತು ಅದರ ಬೀಜಗಳು ಇರುತ್ತವೆ ಎಂದು ಪಂಚನಾಮೆಯಲ್ಲಿ ಬರೆದಿದ್ದೇವೆ . ಎಸ್1 ಮತ್ತು ಎಸ್ 3 ರಲ್ಲಿ ಗಾಂಜಾದ ಎಲೆಗಳು ಎಂದು ಬರೆದಿದ್ದೇವೆ ಅಂದರೆ ಸರಿ. ಮಹಜರನಲ್ಲಿ " ಸ್ಯಾಂಪಲ ತೆಗೆದು ಉಳಿದ ಗಾಂಜಾ ಎಲೆಗಳ ಪಾಕೇಟಗಳನ್ನು " ಎಂದು ನಮೂದಿಸಿದೆ ಅಂದರೆ ಸರಿ.

17. ಠಾಣೆಯಿಂದ ಬಿಟ್ಟ ನಂತರ 5 ರಿಂದ 10 ನಿಮಿಷದಲ್ಲಿ ನಾವು ಘಟನಾಸ್ಥಳಕ್ಕೆ ತಲುಪಿದ್ದೇವೆ. ಸ್ಥಳಕ್ಕೆ ತಲುಪಿದಾಗ ಸಂಜೆ 5.20 ಘಂಟೆ ಆಗಿರಬಹುದು. ನಮ್ಮ ಠಾಣೆಯಿಂದ ಘಟನೆ ನಡೆದ ಸ್ಥಳಕ್ಕೆ ಸುಮಾರು 2 ಕಿ ಮೀ ದೂರ ಇದೆ. ಪಂಚರಿಗೆ ನೋಟೀಸು ಕೊಟ್ಟಾಗ ಸಂಜೆ 4 ಘಂಟೆ ಆಗಿತ್ತು. ಪತ್ರಾಂಕಿತ ಅಧಿಕಾರಿಗೆ ನೋಟೀಸು ಕೊಟ್ಟಾಗ ಸಂಜೆ 4.30 ಘಂಟೆ ಆಗಿತ್ತು. ಈ ಪ್ರಕರಣದ ಸರ್ಕಾರಿ ಪಂಚರು ನಮ್ಮ ಠಾಣೆಗೆ 2-3 ಪ್ರಕರಣಗಳಲ್ಲಿ ಪಂಚರಾಗಿ ಬಂದಿದ್ದಾರೆ ಅಂದರೆ ಸರಿಯಲ್ಲ. ಆರೋಪಿ 1 ಮತ್ತು 2 ರವರನ್ನು 6 ಘಂಟೆ ಗೆ ಹಿಡಿದು 6.15 ರ ವರೆಗೆ ಅವರನ್ನು ವಿಚಾರಣೆಗೆ ಒಳಪಡಿಸಿದ್ದೇವೆ. ಪಂಚನಾಮೆ ಬರೆಯುತ್ತಿರುವುದು ಫೋಟೊಗಳಲ್ಲಿ ಕಂಡುಬರುತ್ತಿಲ್ಲ ಅಂದರೆ ಸರಿ.

18. ದಿಃ 2-9-2020 ರಂದು ಮಧ್ಯಾಹ್ನ 3.15 ಘಂಟೆ ಸುಮಾರಿಗೆ ನಾನು ಎಸ್ ಎಚ್ ಓ ಕರ್ತವ್ಯದಲ್ಲಿದ್ದಾಗ ಯಾರೋ ಇಬ್ಬರು ವ್ಯಕ್ತಿಗಳು ಮೋಟಾರ ಸೈಕಲ ಮೇಲೆ ಗಾಂಜಾ ತೆಗೆದುಕೊಂಡು ದೇಸಾಯಿ ಸರ್ಕಲ ಕಡೆ ಬರುತ್ತಿದ್ದಾರೆಂದು ಬಾತ್ಮಿ ಬಂದಿದ್ದು ಮಾನ್ಯ ಎ ಸಿ ಪಿ ರವರಿಗೆ ಲಿಖಿತವಾಗಿ ವಿಷಯ ತಿಳಿಸಿ ಅವರಿಂದ ಅನುಮತಿ ಪಡೆದಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಇಬ್ಬರು ಸರ್ಕಾರಿ ಪಂಚರನ್ನು ಕಳುಹಿಸುವಂತೆ ತಹಶೀಲ್ದಾರ ಹುಬ್ಬಳ್ಳಿರವರಿಗೆ ಲಿಖಿತವಾಗಿ ಮನವಿ ಸಲ್ಲಿಸಿದ್ದು ಅವರು ಲೋಹಿತ ಮತ್ತು ಮಹೇಶ ಎನ್ನುವವರನ್ನು ಪಂಚರಾಗಿ ಕಳುಹಿಸಿದ್ದು ಸದರಿಯವರಿಗೆ ಪಂಚನಾಮೆಗೆ ಸಹಕರಿಸುವಂತೆ ನೋಟೀಸು ನೀಡಿ ಒಪ್ಪಿಗೆ ಪಡೆದುಕೊಂಡಿದ್ದೇನೆ ಹಾಗೂ ಆರೋಪಿತರ ಅಂಗಶೋಧನೆಗಾಗಿ ಪತ್ರಾಂಕಿತ ಅಧಿಕಾರಿಯನ್ನು ಕಳುಹಿಸಿಕೊಡುವಂತೆ ಆಯುಕ್ತರು, ಹುಬ್ಬಳ್ಳಿ ಧಾರವಾಡ ಮಹಾನಗರ ಪಾಲಿಕೆಯವರಿಗೆ ಕೋರಿಕೊಂಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಚಾಸಾ-8 ರಿಯಾಜ ಅಹ್ಮದ ರವರಿಗೆ ನೋಟೀಸು ನೀಡಿ ದಾಳಿ ಸಮಯದಲ್ಲಿ ಪಂಚರಾಗಿ ಸಹಕರಿಸುವಂತೆ ನೋಟೀಸು ನೀಡಿ ಒಪ್ಪಿಗೆ ಪಡೆದಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ತೂಕ ಮಾಡುವ

ವ್ಯಕ್ತಿಯನ್ನು ಕಳುಹಿಸುವಂತೆ ಸಹಾಯಕ ನಿರೀಕ್ಷಕರು ಕಾನೂನು ಮಾಪನ ಶಾಸ್ತ್ರ ಇಲಾಖೆ ಎ ಪಿ ಎಂ ಸಿ ರವರಿಗೆ ಪತ್ರ ಕಳುಹಿಸಿದ್ದು ಅದರಂತೆ ಚಾಸಾ-9 ಸಿದ್ದಪ್ಪ ಪೂಜಾರ ರವರು ನಮ್ಮ ಠಾಣೆಗೆ ಬಂದಿದ್ದು ಸದರಿಯವರಿಗೆ ನೋಟೀಸು ನೀಡಿ ಒಪ್ಪಿಗೆ ಸಹಿ ಪಡೆದಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

19. ನಂತರ ಇಬ್ಬರು ಪಂಚರು, ಪತ್ರಾಕಿತ ಅಧಿಕಾರಿ , ಸಿಬ್ಬಂದಿಗಳಾದ ಎಸ್ ಎಸ್ ಪಾಂಡೆ , ಎಂ ಬಿ ಧನಗೊಂಡ , ಎಂ ವೈ ಯಕ್ಕಡಿ , ಪಿ ಎಂ ಹೆಗ್ಗೇರಿ , ಮುಲ್ಲಾ , ಅಳಗವಾಡಿ , ಕಮತರ , ಬೀರಣ್ಣ ರವರಿಗೆ ವಿಷಯ ತಿಳಿಸಿ, ನಾವೆಲ್ಲರೂ ಸೇರಿಕೊಂಡು ಸರ್ಕಾರಿ ಜೀಪ ನಂ: ಕೆಎ-25 -ಜಿ- 409 ರಲ್ಲಿ ಮತ್ತು ಚಾಲುಕ್ತ ಜೀಪ ನಂ: ಕೆಎ-25-ಜಿ-652 ವಾಹನಗಳಲ್ಲಿ ಸಂಜೆ 5 ಘಂಟೆಗೆ ಠಾಣೆಯಿಂದ ಹೊರಟು ಪಿಂಟೋ ಸರ್ಕಲಗೆ ಹೋಗಿ , ದೇಸಾಯಿ ಸರ್ಕಲಗೆ ಹೋಗಿದುದ ವಾಹನದ ಜೊತೆಯಲ್ಲಿ ಇನ್ನಿಬ್ಬರು ಸಿಬ್ಬಂದಿ ಬೈಕನಲ್ಲಿ ಬಂದಿದ್ದು ದೇಸಾಯಿ ಸರ್ಕಲ ಬಳಿ ವಾಹನ ನಿಲ್ಲಿಸಿ ವಾಚ್ ಮಾಡುತ್ತಿದ್ದೆವು ಮತ್ತು ಇನ್ನಿಬ್ಬರು ಸಿಬ್ಬಂದಿಗಳು ದೇಶಪಾಂಡೆ ನಗರದ ಮುಖ್ಯ ರಸ್ತೆ ಐ ಬಿ ಕ್ರಾಸ ಹತ್ತಿರ ವಾಚ್ ಮಾಡುತ್ತ ನಿಂತಿದ್ದು ಸಂಜೆ 5-50 ಘಂಟೆ ಸುಮಾರಿಗೆ ಪಿಂಟೋ ಸರ್ಕಲ ಬಳಿ ಇಬ್ಬರು ವ್ಯಕ್ತಿಗಳು ಬೈಕನಲ್ಲಿ ಬಂದಿದ್ದು ಬೈಕ ನಡೆಸುತ್ತಿದ್ದ ವ್ಯಕ್ತಿಯ ಬೆನ್ನ ಹಿಂದೆ ಕಪ್ಪು ಬಣ್ಣದ ಬ್ಯಾಗ ಹಾಗೂ ಹಿಂದೆ ಕುಳಿತ ವ್ಯಕ್ತಿ ಹಳದಿ ಬಣ್ಣದ ಕೈ ಚೀಲ ಹಿಡಿದುಕೊಂಡು ಕುಳಿತಿದ್ದು ಸದರಿ ವ್ಯಕ್ತಿಗಳ ಮೇಲೆ ಸಂಶಯ ಬಂದು ಅವರನ್ನು ಬೆನ್ನತ್ತಿದಾಗ ಅವರು ಬೈಕನ್ನು ಜೋರಾಗಿ ನಡೆಸುತ್ತ ದೇಶಪಾಂಡೆ ಕ್ರಾಸ ಕಡೆಗೆ ಹೋಗಿದ್ದು ಅಲ್ಲಿದ್ದ ನಮ್ಮ ಸಿಬ್ಬಂದಿ ಅವರನ್ನು ಅಡ್ಡಗಟ್ಟಲು ಸದರಿಯವರು ಮರಳಿ ಅಸೆನ ಚರ್ಚನ ಪಕ್ಕದಲ್ಲಿರುವ ಒಂದು ಕಚ್ಚಾ ರಸ್ತೆಯ ಮೂಲಕ ಹೋದರು, ಆದರೆ ಅಲ್ಲಿ ಮುಂದೆ ರಸ್ತೆ ಇಲ್ಲದ ಕಾರಣ ಸದರಿ ಬೈಕ ನಿಧಾನವಾಗಿ ಚಲಿಸುತ್ತಿದ್ದು ನಮ್ಮ ಸಿಬ್ಬಂದಿ ಸದರಿ ಬೈಕ ಸವಾರರನ್ನು ಹಿಡಿದುಕೊಂಡಿದ್ದು ಧನಗೊಂಡ ಮತ್ತು ಪಾಂಡೆ ಎನ್ನುವ ಸಿಬ್ಬಂದಿಗಳು ಬೈಕ ಸವಾರನನ್ನು ಹಿಡಿದುಕೊಂಡರು ಹಾಗೂ ಹಿಂದೆ ಕುಳಿತ ವ್ಯಕ್ತಿಯನ್ನು ಯಕ್ಕಡಿ

ಮತ್ತು ಚಿಕ್ಕಲಗಾರ , ಹೊಸಮನಿ ಎಂಬ ಸಿಬ್ಬಂದಿಗಳು ಹಿಡಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

20. ನಂತರ ನಾವು , ಪಂಚರು , ಪತ್ರಾಂಕಿತ ಅಧಿಕಾರಿ ಮತ್ತು ತೂಕ ಮಾಡುವ ವ್ಯಕ್ತಿ ಎಲ್ಲರೂ ಸೇರಿ ಹೋಗಿ ಅವರನ್ನು ವಿಚಾರಿಸಲಾಗಿ ಬೈಕ ಸವಾರ ತನ್ನ ಹೆಸರು ಮಾರುತಿ ಕಲ್ಲಪ್ಪ ಹರಣಶಿಕಾರಿ ಎಂದು ತಿಳಿಸಿದ್ದು ಹಾಗೂ ಇನ್ನೊಬ್ಬ ವ್ಯಕ್ತಿ ಚಂದಪ್ಪ ಸಿದ್ದಪ್ಪ ಹರಿಣಶಿಕಾರಿ ಎಂದು ತಿಳಿಸಿದ್ದು ಅವರ ಕೈಯಲ್ಲಿ ಗಾಂಜಾ ಇದೆ ಎಂದು ಖಾತ್ರಿಯಾದ ನಂತರ ಇದನ್ನು ಎಲ್ಲಿಂದ ತಂದಿದ್ದೀರಿ ನಿಮಗೆ ಪರ್ಮಿಟ ಇದೆಯಾ ಎಂದು ಕೇಳಿದೆವು ಹಾಗೂ ಅಂಗ ಜಪ್ತಿ ಮಾಡಲು ಪತ್ರಾಂಕಿತ ಅಧಿಕಾರಿಯ ಸಮಕ್ಷಮ ಮಾಡಬೇಕೋ ಅಥವಾ ನ್ಯಾಯಾಧೀಶರ ಸಮಕ್ಷಮ ಮಾಡಬೇಕೋ ಎಂದು ಕೇಳಿ ನೋಟೀಸು ನೀಡಿದ್ದು ಆರೋಪಿ ಮಾರುತಿಯು ಪತ್ರಾಂಕಿತ ಅಧಿಕಾರಿಯ ಮುಂದೆ ಅಂಗಶೋಧನೆ ಮಾಡಬೇಕೆಂದು ಒಪ್ಪಿಗೆ ನೀಡಿ ಸಹಿ ಮಾಡಿದ್ದಾನೆ ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

21. ಪತ್ರಾಂಕಿತ ಅಧಿಕಾರಿಯ ಸಮಕ್ಷಮ 1 ನೇ ಆರೋಪಿಯ ಬ್ಯಾಗನ್ನು ಪರಿಶೀಲಿಸಲಾಗಿ ಅದರಲ್ಲಿ ಎರಡು ಗಾಂಜಾ ತುಂಬಿದ ಪಾಕೇಟಗಳು ಇದ್ದು ಅದರಲ್ಲಿ ಒಂದು ಬ್ಯಾಗನಲ್ಲಿದ್ದ ಗಾಂಜಾವನ್ನು ತೆಗೆದು ತೂಕ ಮಾಡಲಾಗಿ ಅದು 2 ಕೆ ಜಿ 31 ಗ್ರಾಂ ತೂಕ ಇದ್ದು , ಇನ್ನೊಂದು ಬ್ಯಾಗನಲ್ಲಿದ್ದ ಗಾಂಜಾವನ್ನು ತೂಕ ಮಾಡಲಾಗಿ ಅದು 2 ಕೆ ಜಿ 20 ಗ್ರಾಂ ತೂಕ ಇದ್ದು ಆತನ ಸ್ವಾಧೀನದಲ್ಲಿ ರೂ. 1000/- ಇತ್ತು ಹಾಗೂ ಒಂದು ಕರಿ ಬ್ಯಾಗ ಮತ್ತು ಒಂದು ಮೋಟಾರ ಸೈಕಲ ಕೆಎ-26-ಇಡಿ-2911 ನ್ನು ಅಮಾನತುಪಡಿಸಿಕೊಂಡಿರುತ್ತೇವೆ ಮತ್ತು 2 ನೇ ಆರೋಪಿಯ ಬಳಿ ಇದ್ದ ಹಳದಿ ಬ್ಯಾಗನ್ನು ಪರಿಶೀಲಿಸಲಾಗಿ ಅದರಲ್ಲಿ ಗಾಂಜಾ ತುಂಬಿದ ಬಂಡಲ ಇದ್ದು ಅದನ್ನು ತೂಕ ಮಾಡಲಾಗಿ ಅದರಲ್ಲಿ ಒಂದು ಕೆ ಜಿ 49 ಗ್ರಾಂ ತೂಕದ ಗಾಂಜಾ ಇತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

22. 1 ನೇ ಆರೋಪಿಯ ಸ್ವಾಧೀನದಿಂದ ವಶಪಡಿಸಿಕೊಂಡ 2 ಬಂಡಲ ಗಾಂಜಾದಿಂದ ತಲಾ 100 ಗ್ರಾಂ ಗಾಂಜಾವನ್ನು ಮತ್ತು 2 ನೇ ಆರೋಪಿಯ ಸ್ವಾಧೀನದಿಂದ ವಶಪಡಿಸಿಕೊಂಡ ಗಾಂಜಾದಿಂದ ತಲಾ 50 ಗ್ರಾಂ ಗಾಂಜಾವನ್ನು ಮಾದರಿಗಾಗಿ ಪಡೆಯಲಾಯಿತು, ಮಾದರಿಗಾಗಿ ತೆಗೆದ ಗಾಂಜಾವನ್ನು ಬಿಳಿ ಬಟ್ಟೆಯಲ್ಲಿ ಸುತ್ತಿ ಪ್ಯಾಕ ಮಾಡಿ ಪಂಚರ ಮತ್ತು ಪತ್ರಾಂಕಿತ ಅಧಿಕಾರಿಗಳ ಸಹಿ ಇರುವ ಚೀಟಿ ಅಂಟಿಸಿ ಸದರಿ ಪಾಕೇಟಗಳ ಮೇಲೆ ಪಂಚರ ಮತ್ತು ಪತ್ರಾಂಕಿತ ಅಧಿಕಾರಿಗಳ ಸಹಿ ಇರುವ ಚೀಟಿ ಅಂಟಿಸಲಾಯಿತು ಮತ್ತು ಸ್ಯಾಂಪಲ ಗಾಂಜಾ ಪಾಕೇಟ ಮತ್ತು ಉಳಿದ ಗಾಂಜಾ ಪಾಕೇಟ ಮೇಲೆ ಜಿ ಎಂ ಎಫ್ ಎ -2 ಬೋಲ್ಟ ಸೀಲು ಹಾಕಿ ಬೋಲ್ಟನ್ನು ಪಂಚನಾದ ಇಬ್ರಾಹಿಂಪೂರ ರವರಿಗೆ ನೀಡಿ ನ್ಯಾಯಾಲಯದ ಮುಂದೆ ಹಾಜರುಪಡಿಸುವಂತೆ ಹೇಳಿ ಅವರ ಸಹಿ ಪಡೆದಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನಂತರ ಆರೋಪಿತರಿಗೆ ದಸ್ತಗಿರಿ ಮಾಡಿದ್ದು ಎಲ್ಲ ನಡುವಳಿಕೆಯ ಬಗ್ಗೆ ಪಿಸಿ ಮುಲ್ಲಾ ರವರ ಮುಖಾಂತರ ಫೋಟೊಗಳನ್ನು ತೆಗೆಸಿರುತ್ತೇನೆ ಮತ್ತು ಸ್ಥಳದಲ್ಲಿ ಕಚ್ಚಾ ನಕ್ಷೆ ತೆಗೆಸಿ ಪಂಚನಾಮೆಯನ್ನು ಸಂಜೆ 6.15 ರಿಂದ 8.15 ರ ವರೆಗೆ ಬರೆದಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

23. ಆರೋಪಿಗಳನ್ನು ದಸ್ತಗಿರಿ ಮಾಡಿ ಪಂಚನಾಮೆ ಮಾಡಿದ ನಂತರ, ಆರೋಪಿಗಳು, ಪಂಚನಾಮೆ ಮತ್ತು ಮುದ್ದೆಮಾಲುಗಳ ಸಮೇತ ಠಾಣೆಗೆ ವಾಪಸಾಗಿ ಸರ್ಕಾರದ ಪರವಾಗಿ ಲಿಖಿತ ಪಿರ್ಯಾದು ಸಲ್ಲಿಸಿ ನಂತರ ವಿಶೇಷ ವರದಿಯನ್ನು ತಯಾರಿಸಿ ಮೇಲಾಧಿಕಾರಿಗೆ ಸಲ್ಲಿಸಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಈ ಪ್ರಕರಣಕ್ಕೂ ಮುದ್ದೆಮಾಲುಗಳಿಗೂ ಮತ್ತು ಆರೋಪಿತರಿಗೂ ಯಾವುದೇ ಸಂಬಂಧ ಇಲ್ಲ ಅಂದರೆ ಸರಿಯಲ್ಲ.

**ಪಾಟಿ ಸವಾಲು 3 ಮತ್ತು 4 ನೇ ಆರೋಪಿತರ ಪರ ವಕೀಲರಿಂದಃ**

**ಪಾಟಿ ಸವಾಲು ಇಲ್ಲ ಎಂದು ನುಡಿದಿರುತ್ತಾರೆ.**

**ಮರುವಿಚಾರಣೆಃ ಇಲ್ಲ**

(ಈ ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಉಕ್ತ ಹೇಳಿಕೆಯ ಮೇರೆಗೆ ಗಣಕೀಕೃತ ಮಾಡಿಸಲಾಯಿತು).

ಓ. ಹೇ. ಕೇ. ಸರಿ ಇದೆ.

**(ಶ್ರೀಮತಿ ಕೆ.ಜಿ. ಶಾಂತಿ)**
ಪ್ರಧಾನ ಜಿಲ್ಲಾ, ಸತ್ರ ಹಾಗೂ ವಿಶೇಷ
ನ್ಯಾಯಾಧೀಶರು, ಧಾರವಾಡ.